ಪುರಾಣದ ಘಟನೆಗಳೇನೇ ಇರಲಿ, ಹೊಳೆಯಂತೂ ದೇವಿಯರ ಅನುಗ್ರಹವೆಂಬಂತೆ ನಮ್ಮೂರನ್ನು ತನ್ನ ಮಡಿಲಿನಲ್ಲಿಟ್ಟು ಪೊರೆಯುತ್ತಿದ್ದುದಂತೂ ಸತ್ಯ.

ನಮ್ಮೂರಿನಲ್ಲಿ ಕೋಳಿಕೂಗಿ ಬೆಳಗಾಯಿತೆಂದರೆ ಊರ ಜನಗಳೆಲ್ಲ ತಮ್ಮ ಬೆಳಗಿನ ಶೌಚಕ್ಕೆ ಹೋಗುತ್ತಿದ್ದುದು ಹೊಳೆಯ ದಂಡೆಗೆ. ದಡದಲ್ಲಿ ಸಾಲಾಗಿ ಕುಳಿತು ಒಬ್ಬರಿಗೊಬ್ಬರು ಮಾತನಾಡುತ್ತಾ ಹೊಟ್ಟೆಯ ಭಾರವನ್ನು ಕಳೆಯುತ್ತಿದ್ದರೆ ನಾಚಿಕೆಯೆಂಬುದು ಅವರ ಸುತ್ತಲೂ ಸುಳಿಯುತ್ತಿರಲಿಲ್ಲ. ಊರ ಹೆಂಗಸರು ಮಾತ್ರವೇ ಗಂಡಸರೆದುರು ಬಯಲಾಗಲಾರದೇ ಬೆಟ್ಟದ ಗಿಡಗಳ ಮರೆಯನ್ನರಸಿ ಹೋಗುತ್ತಿದ್ದರು. ಬೆಳಗಿನ ತಿಂಡಿ ಮುಗಿಯಿತೆಂದರೆ ಹೆಂಗಸರ ದಂಡು ಪಾತ್ರೆ, ಬಟ್ಟೆಗಳ ಗಂಟುಗಳೊಂದಿಗೆ ಹೊಳೆಯೆಡೆಗೆ ಪಯಣಿಸುತ್ತಿತ್ತು. ಅವೆಲ್ಲವನ್ನೂ ಶುಚಿಗೊಳಿಸುತ್ತ ತಮ್ಮ ದಿನದ ದಂದುಗದ ಕಥೆಗಳನ್ನು ಹೇಳಿ ಮನಸ್ಸಿನ ದುಗುಡವನ್ನೂ ಹಗುರಗೊಳಿಸಿಕೊಳ್ಳುತ್ತಿದ್ದರು. ನಡುನಡುವೆ ಅಲ್ಲಲ್ಲಿ ಊರಿನ ದೊಡ್ಡ, ದೊಡ್ಡ ಮನೆಯವರ ದಪ್ಪ ಗೋಡೆಗಳ ನಡುವಿನ ಗುಟ್ಟುಗಳೆಲ್ಲವೂ ಬಯಲಾಗುತ್ತ, ಅಲ್ಲಲ್ಲಿ ಹೊಗೆಯಾಡುವ ಬಯಕೆಯ ಕಥೆಗಳು ಹೊರಳಾಡುತ್ತ ಮಾತುಕತೆಗಳು ರಂಗು ಪಡೆಯುತ್ತಿದ್ದರೆ, ಹರಿಯುವ ಹೊಳೆಯೂ ಇವೆಲ್ಲವನ್ನು ಕೇಳಿಸಿಕೊಳ್ಳುವಂತೆ ಕೊಂಚ ನಿಧಾನಿಸುತ್ತಿತ್ತು. ಹೊಳೆಯ ಕಾರಣದಿಂದಲಾಗಿ ನಾಲ್ಕಾರು ಮನೆಗಳಿಗೊಂದರಂತೆ ಬಾವಿಗಳಿರುತ್ತಿದ್ದುದರಿಂದಲೂ, ಅವುಗಳಿಂದ ನೀರೆತ್ತುವ ಕೆಲಸ ತ್ರಾಸದಾಯಕವಾಗಿರುವುದರಿಂದಲೂ ಎಲ್ಲರೂ ನೀರಿಗಾಗಿ ಹೊಳೆಯನ್ನೇ ಆಶ್ರಯಿಸುವುದು ಸಹಜವಾಗಿತ್ತು. ಹೊಳೆಯಲ್ಲಿ ಸಳಸಳನೆ ಓಡಾಡುವ ಮೀನುಗಳು ಪಾತ್ರೆಯುಜ್ಜುವ ಬೂದಿಯನ್ನು ಕಬಳಿಸುತ್ತ, ಪಾತ್ರೆಗಳಿಗೆ ಅಂಟಿಕೊಂಡ ಕೊಳೆಗಾಗಿ ಸುಳಿಯುತ್ತ ಹೆಂಗಸರ ಕಾಲುಗಳಿಗೆ ಕಚಗುಳಿಯಿಟ್ಟು ನಗಿಸುತ್ತಿದ್ದವು. ಈ ಸಂತೆ ಮುಗಿಯುತ್ತಿದ್ದಂತೆ ಗಂಡಸರು ಉತ್ತು ಸುಸ್ತಾದ ತಮ್ಮ ಎತ್ತುಗಳಿಗೆ ನೀರು

